ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 45/2025

.......................................................................

CW 06
PW 05

ಹೆಸರು : ಮಧುಮಾಲತಿ
ಗಂಡನ ಹೆಸರು : ಸಣ್ಣನಿಂಗಪ್ಪ
ವಯಸ್ಸು : 35 ವರ್ಷ
ಉದ್ಯೋಗ : ಕಂಡಕ್ಟರ್
ವಾಸಸ್ಥಳ : ದಾಂಡೇಲಿ.

ದಿನಾಂಕ 09-12-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 1 ರಿಂದ 5 ರವರು ಪರಿಚಯ ಇಲ್ಲ. ಚಾಸಾ 8 ರವರು ಹಳಿಯಾಳದ ಡಿಪೋ ಕಂಟ್ರೋಲರ್ ಆಗಿದ್ದರು. ಆರೋಪಿ ದಿನಾಂಕ 31-10-2024 ರಂದುನಾನು ಕರ್ತವ್ಯ ನಿರ್ವಹಿಸುತ್ತಿದ್ದ ಬಸ್ ನಂಬರ ಕೆಎ-25-ಎಫ್ -3374 ರ ಚಾಲಕರಾಗಿದ್ದರು.

ಆ ದಿನ ನಾವು ದಾಂಡೇಲಿಯಿಂದ ಧಾರವಾಡಕ್ಕೆ ಹೋಗುತ್ತಿದ್ದೇವು. ಅಜಗಾಂವ ಮತ್ತು ಕೆಸರೊಳ್ಳಿ ಮಧ್ಯದಲ್ಲಿ ನಾನು ಟಿಕೆಟ್ ಕೊಡುತ್ತಿದ್ದೆ. ಆಗ ಜೋರಾಗಿ ಶಬ್ದ ಕೇಳಿತು ಮತ್ತು ನಮ್ಮ ಬಸ್ ನಿಂತಿತು. ಆ ಸಮಯದಲ್ಲಿ ನಮ್ಮ ಬಸ್ ನಿಧಾನವಾಗಿ ಚಲಾಯಿಸುತ್ತಿತ್ತು. ನಾವು ಇಳಿದು ಹೋಗಿ ನೋಡಿದಾಗ ಬೈಕ್ ಚಾಲಕ ಬಿದ್ದಿದ್ದನು. ಆತನಿಗೆ ಪ್ರಜ್ಞೆ ಇರಲಿಲ್ಲ. ಅಲ್ಲಿದ್ದ ಜನರು ಆತನಿಗೆ ಉಪಚರಿಸುತ್ತಿದ್ದರು. ನಂತರ ಆತನ ಕಾಲು ಮುರಿದಿತ್ತು ಎಂದು ಮಾತನಾಡಿದರು, ನಾನು ಆತನ ಹತ್ತಿರ ಹೋಗಲಿಲ್ಲ. ಬೈಕ್ ನ ನಂಬರ ಗೊತ್ತಿಲ್ಲ. ಬೈಕ್ ನ್ನು ನೋಡಿದರೆ ಗುರುತಿಸುತ್ತೇನೆ. ಈ ಬಗ್ಗೆ ಪೊಲೀಸರು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಸಾಕ್ಷಿಗೆ ನಿಪಿ 5 ಮತ್ತು 7 ಅನ್ನು ತೋರಿಸಿ ಕೇಳಲಾಗಿ ಸದರಿ ವಾಹನಗಳ ನಡುವೆ ಅಪಘಾತ ಆಗಿತ್ತು ಎಂದು ನುಡಿಯುತ್ತಾರೆ. ನಂತರ ಬೈಕ್ ಚಾಲಕನನ್ನು ಅಂಬ್ಯುಲೆನ್ಸ್ ನಲ್ಲಿ ಹಳಿಯಾಳ ಸರ್ಕಾರಿ ಆಸ್ಪತ್ರೆಗೆ ಕಳುಹಿಸಲಾಯಿತು.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 01-11-2024 ರಂದು ಹೇಳಿಕೆ ನೀಡಿ ಅದರಲ್ಲಿ ದಿನಾಂಕ 31-10-2024 ರಂದು ಕೆಸೊಳ್ಳಿ ಕ್ರಾಸ ಸಮೀಪದ ತಿರುವಿನಲ್ಲಿ ನಮ್ಮ ಬಸ್ಸಿನ ಚಾಲಕನು ಬಸ್ಸನ್ನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗಿ ತಿರುವು ರಸ್ತೆಯಲ್ಲಿ ತನ್ನ ಮುಂದಿನಿಂದ ಹಳಿಯಾಳ ಕಡೆಗೆ ಬರುತ್ತಿದ್ದ ಮೋಟಾರ ಸೈಕಲ್ ಸವಾರನಿಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿದನು, ಅಪಘಾತದಲ್ಲಿ ಮೋಟಾರ ಸೈಕಲ್ ಸವಾರನ ಬಲಕಾಲಿಗೆ ರಕ್ತದ ಗಾಯ ನೋವು, ಗದ್ದಕ್ಕೆ ರಕ್ತದ ಗಾಯ ಹಾಗೂ ಮೈಕೈಗೆ ಅಲ್ಲಲ್ಲಿ ಗಾಯನೋವುಗಳು ಆಗಿರುತ್ತವೆ, ಬೈಕಿನ ಮುಂದಿನ ಡೂಮ್ ಪೂರ್ತಿ ಜಖಂ ಗೊಂಡಿರುತ್ತದೆ. ಬೈಕಿನ ನಂಬರ ಕೆಎ-25-ಎಚ್ ಜೆ-2647 ಇರುತ್ತದೆ ಅಂತಾ ನುಡಿದಿರುತ್ತೀರಿ ಎಂದರೆ ಸರಿಯಲ್ಲ. ಆಗ ಸಮಯ ಸುಮಾರು 03-35 ಆಗಿತ್ತು ಎಂದರೆ ಸರಿ. ಆರೋಪಿತ ಅತಿ ವೇಗವಾಗಿ ವಾಹನವನ್ನು ಚಲಾಯಿಸಿಕೊಂಡು ಬಂದು ಬೈಕಿಗೆ ಡಿಕ್ಕಿ ಪಡಿಸಿದನು ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಬಸ್ ನ ಚಾಲಕನು ಬಸ್ಸನ್ನು ನಿಧಾನವಾಗಿ ಚಲಾಯಿಸುತ್ತಿದ್ದನು ಎಂದು ಸುಳ್ಳು ನುಡಿದಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ 10 ಎಂದು, ಅಲ್ಲಗಳೆದ ಭಾಗವನ್ನು ನಿಪಿ 10 ಎ ಎಂದು ಗುರುತಿಸಲಾಯಿತು.

ಆರೋಪಿತನ ನಿಮ್ಮ ಇಲಾಖೆಯವರು ಆಗಿದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

23-11-2024 ರಂದು ಪೊಲೀಸರಿಗೆ ಹೇಳಿಕೆ ನೀಡಿ ಅದರಲ್ಲಿ ದಿನಾಂಕ 31-10-2024 ರಂದು ---------------------- ಕೆ ಎಸ್ ಆರ್ ಟಿ ಸಿ ಅಂತಾ ಚಾಲಕನ ಮೇಲೆ ದೂರು ನೀಡಿದ ವಿಷಯ ತಿಳಿಯಿತು ಎಂದು ನುಡಿದಿರುತ್ತೀರಿ ಎಂದರೆ ಸರಿಯಲ್ಲ. ಸದರಿ

ಅಲ್ಲಗಳೆದ ಅವರ ಹೇಳಿಕೆಯನ್ನು **ನಿಪಿ 9 ಎಂದು** ಗುರುತಿಸಲಾಯಿತು. ಸಾಕ್ಷಿಗೆ ನಿಪಿ 5 ಮತ್ತು 7 ರ ಭಾವಚಿತ್ರವನ್ನು ತೋರಿಸಿ ಅವುಗಳಲ್ಲಿ ಕಾಣುವ ವಾಹನಗಳ ನಡುವೆ ಅಪಘಾತ ವಾಗಿತ್ತು, ಸದರಿ ಅಪಘಾತವನ್ನು ನೀವು ಕಣ್ಣಾರೆ ನೋಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು** : ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.